<u>**ಕರ್ನಾಟಕ ವಿಧಾನ ಪರಿಷತ್ತು**</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 320 (281) |
| ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು (ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ) |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹುಬ್ಬಳ್ಳಿಯಲ್ಲಿ ಸ್ಥಾಪಿತವಾದ ಡಾ:ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್‌ಗೆ ಸರ್ಕಾರದ ಪ್ರತಿ ವರ್ಷ ಕೊಡುತ್ತಿರುವ ಅನುದಾನವೆಷ್ಟು; (ಐದು ವರ್ಷಗಳ ಅನುದಾನದ ವಿವರ ನೀಡುವುದು)</td><td>ಡಾ.ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್, ಉಣಕಲ್, ಹುಬ್ಬಳ್ಳಿ (ಈ ಪೂರ್ವದಲ್ಲಿ ಹಿಂದುಸ್ಥಾನಿ ಸಂಗೀತ ಕೇಂದ್ರ) ಈ ಸಂಸ್ಥೆಗೆ ಕಳೆದ ಐದು ವರ್ಷಗಳ ಆಯ-ವ್ಯಯದಲ್ಲಿ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ಲೆಕ್ಕ ಶೀರ್ಷಿಕೆ</th><th>ಉಪ ಶೀರ್ಷಿಕೆ</th><th>2020-21</th><th>2021-22</th><th>2022-23</th><th>2023-24</th><th>2024-25</th></tr>
<tr><td>2205-00-101-0-08</td><td>101-ಸಹಾಯಾನುದಾನ ವೇತನ</td><td>20.00</td><td>10.00</td><td>30.00</td><td>97.49</td><td>24.49</td></tr>
<tr><td></td><td>115-ಸಹಾಯಾನುದಾನ ಗುತ್ತಿಗೆ/ ಹೊರಗುತ್ತಿಗೆ</td><td>00</td><td>00</td><td>20.40</td><td>25.46</td><td>0.00</td></tr>
<tr><td></td><td>ಒಟ್ಟು</td><td>20.00</td><td>10.00</td><td>50.40</td><td>122.95</td><td>24.49</td></tr>
</table>
</td></tr>
<tr><td>ಆ)</td><td>ಈ ಗುರುಕುಲ ಅನುದಾನದ ಕೊರತೆ, ಸಂಗೀತ ಶಿಕ್ಷಕರ ಕೊರತೆ, ಕರ್ನಾಟಕದ ವಿದ್ಯಾರ್ಥಿಗಳ ಆಯ್ಕೆಯಲ್ಲಿ ತಾರತಮ್ಯ, ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಮುಂತಾದ ಸಮಸ್ಯೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಅಗತ್ಯ ವಿದ್ಯಾರ್ಥಿಬಲವುಳ್ಳದ ಕಾರಣದಿಂದ ಡಾ.ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್ (ರಿ), ಉಣಕಲ್, ಹುಬ್ಬಳ್ಳಿ, ಸಂಸ್ಥೆಯ ನಿರ್ವಹಣೆಗೆ ವಾರ್ಷಿಕ ರೂ.213.00ಲಕ್ಷಗಳ ವೆಚ್ಚವಾಗುತ್ತಿದ್ದು, ಸರ್ಕಾರಕ್ಕೆ ಹೆಚ್ಚಿನ ಅರ್ಥಿಕ ಹೊರೆ ಉಂಟಾಗುತ್ತಿರುವುದನ್ನು ಮನಗಂಡು ಪ್ರಸ್ತುತ ಸಂಗೀತದ ಎಲ್ಲಾ ಪ್ರಾಕಾರಗಳು ಮತ್ತು ಪ್ರದರ್ಶಕ ಕಲೆಗಳ ಪ್ರೋತ್ಸಾಹಕ್ಕಾಗಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನ್‌ಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿರುವುದರಿಂದ, ಸದರಿ ಟ್ರಸ್ಟ್ ನ್ನು ಪ್ರತ್ಯೇಕವಾಗಿ ಮುಂದುವರಿಸುವ ಅವಶ್ಯಕತೆ ಇರುವುದಿಲ್ಲ ಎಂದು ನಿರ್ಣಯಿಸಲಾಗಿದೆ.<br><br>ಆದ್ದರಿಂದ, ಈ ಸಂಸ್ಥೆಯ ಎಲ್ಲಾ ಕಾರ್ಯಚಟುವಟಿಕೆ/ಚರ-ಸ್ಥಿರಾಸ್ತಿ ಇತ್ಯಾದಿಗಳನ್ನು ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಈ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಇಡಿ 134 ಯುಎನ್‌ಇ 2023, ದಿನಾಂಕ: 28.02.2024ರನ್ವಯ ಹಸ್ತಾಂತರಿಸಿ ಆದೇಶಿಸಲಾಗಿದೆ.</td></tr>
<tr><td>ಇ)</td><td>ರಾಷ್ಟ್ರದ ಪ್ರಸಿದ್ಧ ಗಾಯಕಿಯ ಹೆಸರಿನಲ್ಲಿರುವ ಗುರುಕುಲ ಇಂದು ಕೆಲವೇ ವ್ಯಕ್ತಿಗಳ ಗಂಜಿಕೇಂದ್ರವಾಗಿದ್ದು, ಅದರ ಪುನಶ್ಚೇತನ ಮಾಡಿ ಸಂಗೀತ ಗುರುಗಳಿಗೆ</td><td>ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಈ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿರುವುದರಿಂದ, ಸದರಿ ಸಂಸ್ಥೆಯನ್ನು ಪುನಶ್ಚೇತನ ಮಾಡಿ ಸಂಗೀತ ಗುರುಗಳಿಗೆ ಪ್ರತಿ ತಿಂಗಳು ಗೌರವ ಧನ ನೀಡಿ</td></tr>
</table>

| | | |
|---|---|---|
| | ಪ್ರತಿ ತಿಂಗಳು ಗೌರವ ಧನ ನೀಡಿ ಈ ಗುರುಕುಲ ಬೆಳೆಸಲು ಸರ್ಕಾರದ ಚಿಂತನೆಯೇನು; | ಗುರುಕುಲ ಬೆಳೆಸುವ ಅವಶ್ಯಕತೆ ಕಂಡುಬರುವುದಿಲ್ಲ. |
| ಈ) | ಈ ಗುರುಕುಲವನ್ನು ಕಂದಾಯ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾಯಿಸದಿರಲು ಕಾರಣವೇನು; | ಡಾ.ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್ (ರಿ) ಉಣಕಲ್, ಹುಬ್ಬಳ್ಳಿ ಸಂಸ್ಥೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಹಸ್ತಾಂತರಿಸುವ ಕುರಿತು ಪರಿಶೀಲಿಸಲಾಗುತ್ತಿದೆ. |
| ಉ) | ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿನ ಈ ಗುರುಕುಲವನ್ನು ಪೂರ್ಣ ಪ್ರಮಾಣದ ಸಂಗೀತ ವಿಶ್ವವಿದ್ಯಾಲಯವನ್ನಾಗಿ ಸ್ಥಾಪಿಸುವ ಕುರಿತು ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಪ್ರಸ್ತುತ ಸಂಗೀತದ ಎಲ್ಲಾ ಪ್ರಾಕಾರಗಳು ಮತ್ತು ಪ್ರದರ್ಶಕ ಕಲೆಗಳ ಪ್ರೋತ್ಸಾಹಕ್ಕಾಗಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನ್‌ಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿರುವುದರಿಂದ ಈ ಗುರುಕುಲವನ್ನು ಈಗಾಗಲೇ ಸದರಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿದೆ.<br><br>ಆದಕಾರಣ ಈ ಹಂತದಲ್ಲಿ ಗುರುಕುಲವನ್ನು ಪೂರ್ಣ ಪ್ರಮಾಣದ ಸಂಗೀತ ವಿಶ್ವವಿದ್ಯಾಲಯವನ್ನಾಗಿ ಸ್ಥಾಪಿಸಲು ಕ್ರಮವಹಿಸುವ ಅವಶ್ಯಕತೆ ಇರುವುದಿಲ್ಲ. |

ಕಡತ ಸಂಖ್ಯೆ: ಇಡಿ 150 ಹೆಚ್‌ಪಿಯು 2024)

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು